**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**
**ಕನಕಪುರ.**

CC No. 645/2012

CW -1 PW - 5

| | | |
|---|---|---|
| ಹೆಸರು | ः | ವಿಜಯಕುಮಾರ್ ಜಿ.ಆರ್. |
| ತಂದೆಯ ಹೆಸರು | ः | ರಾಮಕೃಷ್ಣ ಜಿ.ಕೆ. |
| ವಯಸ್ಸು | ः | 39 ವರ್ಷ |
| ಉದ್ಯೋಗ | ः | ಆರ್.ಎಫ್.ಓ |
| ವಾಸ | ः | ಸಕಲೇಶಪುರ. |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ः ಮಾನ್ಯ ಎಪಿಪಿ ಯವರಿಂದ ः ದಿನಾಂಕ 07.08.2025.

ನಾನು 2010 ನೇ ಸಾಲಿನಲ್ಲಿ ನಾನು ಕನಕಪುರ ವಲಯದಲ್ಲಿ ಉಪ ಅರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 22-02 2011 ರಂದು ನಾನು ಮತ್ತು ನನ್ನ ಸಿಬ್ಬಂದಿಯವರು ಗಸ್ತು ಮಾಡುತ್ತಿರುವ ಸಮಯದಲ್ಲಿ ಬೆಟ್ಟಹಳ್ಳಿಯ ಎ ಬಿ ಸಿ ರಕ್ಷಿತ ಅರಣ್ಯದ ಪ್ರದೇಶದಲ್ಲಿ ಸ ನಂ 67 ರಲ್ಲಿ ಒಂದು ಟಾಟಾ ಹಿಟಾಚಿ 300 ಕೇಸರಿ ಬಣ್ಣದ ವಾಹನ ನಿಂತಿತ್ತು. ನಂತರ ನಾವು ನಮ್ಮ ಸಿಬ್ಬಂದಿಯವರಾದ ಚಾ.ಸಾ 2 ರಿಂದ 4 ರವರು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ , ಅಲ್ಲೇ ಇದ್ದ ಆರೋಪಿ 2 ವ ರನ್ನು ವಿಚಾರಿಸಿದಾಗ ಕಲ್ಲುಗಣಿ ಕೆಲಸ ಮಾಡಲು ಸದರಿ ಸ್ಥಳದಲ್ಲಿ ಟಾಟಾ ವಾಹನ ತಂದಿರುವುದಾಗಿ ಹೇಳಿರುತ್ತಾರೆ. ಈ ರೀತಿ ವಾಹನವನ್ನು ತರುವಾಗ ಅವರು ಅರಣ್ಯ ಸಂಪತ್ತಾದ ಜುಜ್ಜಲಿ, ಬೆಪ್ಪಾಲೆ, ಮಶುವಾಳ ಎಂಬ 9 ಮರಗಳನ್ನು ನಾಶಪಡಿಸಿರುವುದು ಕಂಡುಬಂದಿರುತ್ತದೆ, ಹಾಗೂ ಗೋಮಾಳದ ಭೂಮಿಯನ್ನು ಮಟ್ಟ ಮಾಡಿರುವುದು ಕಂಡುಬಂದಿರುತ್ತದೆ. ಆರೋಪಿತರು ಮಾಡಿರುವ ಕೃತ್ಯ ಅರಣ್ಯ ಸಂಪತ್ತನ್ನು ನಾಶ ಮಾಡಿರುವುದು ಹಾಗೂ ಅರಣ್ಯದ ಒಳಗಡೆ ಅತಿಕ್ರಮ ಪ್ರವೇಶಿಸುವುದು ಕಂಡು ಬಂದಿರುತ್ತದೆ. ಈ ಘಟನೆ ಸಂಬಂಧ ಪಂಚನಾಮೆ ಮಾಡುವ ಸಲುವಾಗಿ ಅಲ್ಲಿ ಸ್ಥಳೀಯರು ಯಾರೂ ಕಾಣದೇ ಇರುವ ಕಾರಣ

ಇಲಾಖೆ ಸಿಬ್ಬಂದಿಯರನ್ನೇ ಪಂಚರನ್ನಾಗಿ ಮಾಡಿ ಕೊಂಡು ಪಂಚನಾಮೆಯನ್ನು ಬೆಳಗ್ಗೆ 10.30 ಗಂಟೆಯಿಂದ 12 ಗಂಟೆಯವರೆಗೆ ಮಾಡಿರುತ್ತೇನೆ. ಪಂಚನಾಮೆ ಆಗುವ ಸಮಯದಲ್ಲಿ ವಾಹನವನ್ನು ವಶಪಡಿಸಿಕೊಂಡು , ಅಲ್ಲಿ ಬಿದ್ದಂತಹ ಮರವನ್ನು ಸಹ ಪಂಚನಾಮೆಯಲ್ಲಿ ನಮೂದು ಮಾಡಿ , ವಶಪಡಿಸಿಕೊಂಡತಹ ವಸ್ತುಗಳನ್ನು ಚಾ.ಸಾ. 3 ರವರಿಗೆ ನೀಡಿ ಅದನ್ನು ಸಹ ಪಂಚನಾಮೆಯಲ್ಲಿ ನಮೂದಿಸಲಾಯಿತು. ಸಾಕ್ಷಿ ದಾರರು ನಿ.ಪಿ. 2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಡಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಎಫ್. ಐ ಆರ್. ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.4 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು : ಶ್ರೀ. ಕೆ.ವಿ.ವಿ. ವಕೀಲರಿಂದಃ</u>

ನಾನು ಕನಕಪುರ ಕಛೇರಿಯಿಂದ ಘಟನಾ ಸ್ಥಳಕ್ಕೆ ಹೋಗುವಾಗ ಕಛೇರಿ ಬಿಟ್ಟ ಸಮಯ ಬೆಳಗ್ಗೆ 9.30 ಗಂಟೆ ಆಗಿತ್ತು. ನಮ್ಮ ಜೊತ್ತೆ ಆ ಸಮಯದಲ್ಲಿ ಚಾ.ಸಾ. 2 ರಿಂದ 4 ಇದ್ದರು. 3 ಜನ ನಮ್ಮ ಜೊತೆ ಇದ್ದರು. ನಾವು ಇಲಾಖಾ ವಾಹನದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ವಾಹನದ ನಂಬರ್ ನೆನಪಿರುವುದಿಲ್ಲ. ಘಟನಾ ಸ್ಥಳಕ್ಕೆ ಹೋದಾಗ ಸರಿ ಸುಮಾರು 10 ಗಂಟೆ ಆಗಿತ್ತು. ಅರಣ್ಯ ಪ್ರದೇಶದಲ್ಲಿ ಹೊಂದಿಕೊಂಡಂತೆ ಸ ನಂ 67 ಇದೆ ಎಂದು ಹೇಗೆ ತಿಳಿಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ಸರ್ವೆ ಪ್ರಕಾರ ತಿಳಿಯಿತು ಎಂದು ನುಡಿಯುತ್ತಾರೆ. ಸ ನಂ 67 ಗೋಮಾಳದ ಜಾಗ ಎಂದರೆ ಸರಿ. ಸ . ನಂ 67 ರಲ್ಲಿ ಸರ್ಕಾರದವರು 1 ನೇ ಆರೋಪಿಗೆ ಬೋಗ್ಯದ ಮೂಲಕ ಕೋರೆ ಮಾಡಲು ಅನುಮತಿ ನೀಡಿರುತ್ತಾರೆ ಎಂದರೆ ಸರಿ. ಸದರಿ ಬೋಗ್ಯವನ್ನು ಆರೋಪಿಗೆ ನೀಡುವ ಮುಂಚೆ ನಿಮ್ಮ ಇಲಾಖೆಯ ಮುಖ್ಯಸ್ಥರಿಂದ ಅನುಮತಿ ಪಡೆದೇ ಆರೋಪಿ 1 ರವರಿಗೆ ಸ ನಂ 67 ರಲ್ಲಿ ಕೋರೆ ನಡೆಸಲು ಅನುಮತಿ ನೀಡಿರುತ್ತಾ ರೆ ಎಂದರೆ ನನಗೆ ಗೊತ್ತಿಲ್ಲ. ನೀವು ನಿಮ್ಮ ಎಫ್.ಐ. ಆರ್ ನಲ್ಲೂ ಸಹ ಆರೋಪಿ 1 ರವರಿಗೆ ಸದರಿ ಸ ನಂ 67 ರಲ್ಲಿ ಕೋರೆ ನಡೆಸಲು ಸರ್ಕಾರದವರು ಅನುಮತಿ ನೀಡಿದ್ದಾರೆ ಎಂದು ನಮೂದು ಮಾಡಿದ್ದೀರಿ ಎಂದರೆ ಸರಿ. ನೀವು ನಿಮ್ಮ ವರದಿಯಲ್ಲಿ ಆರೋಪಿತರು ನೆಲವನ್ನು ಸಮ ಮಾಡಿದ್ದಾರೆ ಎಂದು ಗೋಮಾಳದಲ್ಲಿ ಮರಗಳನ್ನು ಕಿತ್ತಾಗಿದ್ದಾರೆ ಎಂದು

ಹೇಳಿರುತ್ತೀರಾ ಹೊರತು ಅರಣ್ಯ ಪ್ರದೇಶದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅರಣ್ಯ ಪ್ರದೇಶದಲ್ಲಿ ಬಂದಿರುವುದಿಲ್ಲ, ಆರೋಪಿತರು ಗೋಮಾಳದಲ್ಲಿ ಅನುಮತಿ ಮೇರೆಗೆ ನೆಲ ಸಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಮ್ಮ ಠಾಣೆಯ ಅಂಕಿ ಅಂಶಕ್ಕೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಕೋರೆ ಕೆಲಸ ಮಾಡುತ್ತಿದ್ದ ಕಾರಣ ಅಲ್ಲಿ ಸಾಕಷ್ಟು ಕೆಲಸಗಾರರು ಇದ್ದರು ಎಂದರೆ ಸರಿ. ಕೆಲಸಗಾರರ ಸಹಿಯನ್ನು ಪಂಚನಾಮೆಯಲ್ಲಿ ಪಡೆದಿರುವುದಿಲ್ಲ ಎಂಬ ಹೇಳಿಕೆಗೆ ಸಾಕ್ಷಿದಾರರು ಕೆಲಸಗಾರರು ಆರೋಪಿತರ ಕಡೆ ಆಗಿದ್ದ ಕಾರಣ ಯಾರೂ ಸಾಕ್ಷಿ ಹೇಳಲು ಮುಂದೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸ ನಂ 67 ರಲ್ಲೂ ಸಹ ಸಾಕಷ್ಟು ಮರಗಳಿವೆ ಎಂದರೆ ಸರಿ. ಆರೋಪಿತರು ಸರ್ಕಾರದಿಂದ ಅನುಮತಿ ಪಡೆದ ಸ್ಥಳದಲ್ಲಿ ಮಾತ್ರ ಕೋರೆ ಕೆಲಸ ಮಾಡುತ್ತಿದ್ದರು, ಅರಣ್ಯ ಪ್ರದೇಶಕ್ಕೆ ಯಾವತ್ತೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅರಣ್ಯ ಪ್ರದೇಶಕ್ಕೆ ಬಂದು ಯಾವುದೇ ಮರಗಳನ್ನು ಬೀಳಿಸಿರಲಿಲ್ಲ, ನೀವು ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ, ಪಂಚನಾಮೆ ಕ್ರಿಯೆಯನ್ನು ಜರುಗಿಸಿರುವುದಿಲ್ಲ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನರಸೇಗೌಡರವರಿಗೆ ಜಪ್ತಿ ಪಡಿಸಿದ ಮರಗಳನ್ನು ನೀಡಿರುತ್ತಿದ್ದೀ ರಾ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ. ಆನಂತರ ತಯಾರಿಸಿದ್ದೀನಿ ಎಂದರೆ ಸರಿ. ಈ ಪ್ರಕರಣದ ಅನುಕೂಲಕ್ಕೋಸ್ಕರ ನಕಾಶೆಯನ್ನು ತಯಾರಿಸಿರುತ್ತೀರಿ , ಈ ಪ್ರಕರಣಕ್ಕೂ ನಕಾಶೆಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರು ನೀಡಿರುತ್ತೀರಿ, ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಸಹಿ/-
**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**